ಭಾರತೀಯ ಕಾವ್ಯ ಪರಂಪರೆಯ ಬಹುತೇಕ ಭಾಗ ಇದನ್ನೇ ಅನುಸರಿಸಿದೆ. ಮುಖ್ಯವಾಗಿ ಜನಪದ ಕಾವ್ಯ ಗಮನಿಸಿ. ಭಕ್ತಿಕಾವ್ಯ ನೋಡಿರಿ. ಇದರಲ್ಲಿ ಯಾರ ಮಹಿಮೆಯನ್ನು ಹಾಡಲಾಗಿದೆ? ಯಾರು ಬಡವರೋ ನಿರ್ಗತಿಕರೋ ಅವರ ಕುರಿತು ಇರುವಂಥ ಕಾವ್ಯವಿದು. ವಾಲ್ಮೀಕಿಯಿಂದಲೇ ಶುರುಮಾಡಿ. ಎಲ್ಲಿಂದ ಶುರುವಾಗಿದೆ ಈ ಮಹಾಕಾವ್ಯ? ಒಂದು ಕ್ರೌಂಚ ಪಕ್ಷಿಯ ಹತ್ಯೆಯಿಂದ. ಯಾಕೆ ಪಕ್ಷಿಯೊಂದರ ಹತ್ಯೆಗೆ ಇಷ್ಟು ನರಳಬೇಕಿತ್ತು? ಪ್ರೇಮದಲ್ಲಿ ತೊಡಗಿದ್ದ ಪಕ್ಷಿಗಳಲ್ಲಿ ಒಂದು ಪಕ್ಷಿಯ ಹತ್ಯೆಯಾಗಿದೆ. ಇದು ಕೇವಲ ಪಕ್ಷಿಯೊಂದರ ಸಾವಿನ ಪ್ರಶ್ನೆಯಲ್ಲ. ಜೀವನದಲ್ಲಿ ತೊಡಗಿಕೊಂಡಿದ್ದ, ಪ್ರೀತಿಯಲ್ಲಿ ತೊಡಗಿಕೊಂಡಿದ್ದ ಜೀವನದ ನಾಶವಿದು. ಪ್ರೇಮದ ನಾಶವಿದು. ವಾಲ್ಮೀಕಿ ಬಗ್ಗೆ ನಿರಾಲಾ ಒಂದು ಕವಿತೆ ಬರೆದಿದ್ದರು. ಅದರಲ್ಲಿ ವಾಲ್ಮೀಕಿಯನ್ನು ವಿಭಿನ್ನ ಕೋನದಿಂದ ನೋಡಲಾಗಿತ್ತು. ವಾಲ್ಮೀಕಿ ತಮ್ಮ ರಾಮಾಯಣದಲ್ಲಿ ಭೂಮಿಪುತ್ರಿಯನ್ನು ಗೌರವಿಸಿದ್ದರು. ಆಕೆ ಯಾರೆಂದರೆ, ಸೀತೆ. ರಾಮಾಯಣವೆಂದು ಆ ಮಹಾಕಾವ್ಯಕ್ಕೆ ಹೆಸರಿರಬಹುದು. ಆದರೆ ಅದರಲ್ಲಿ ಉಜ್ವಲ ಚರಿತ್ರೆ ಇರುವುದು ಸೀತೆಯದ್ದು ಮಾತ್ರ. ಇಡೀ ರಾಮಾಯಣದಲ್ಲಿ ಆಕೆಗೆ ತನ್ನ ಬಗ್ಗೆ ಇರುವಷ್ಟು ಸ್ಪಷ್ಟ ಕಲ್ಪನೆ ಬೇರಾವ ಪಾತ್ರಗಳಿಗೂ ತಮ್ಮ ವ್ಯಕ್ತಿತ್ವದ ಬಗ್ಗೆ ಇಲ್ಲ. ಅದು ನಿಜವಾಗಿಯೂ ಸೀತೆಯ ರಾಮಾಯಣ. ಭವಭೂತಿ, ಕಾಳಿದಾಸ, ಅಶ್ವಘೋಷ ಯಾರನ್ನೇ ನೋಡಿದರೂ ಅವರ ಕಾವ್ಯ ಆಳದಲ್ಲಿ ಯಾರನ್ನು ಒಳಗೊಳ್ಳುತ್ತಿದೆ? 'ಮೃಚ್ಛಕಟಿಕ' ನೋಡಿ. ಇದಂತೂ ಬಡವರ ಕತೆಯೇ ಆಗಿದೆ. 'ಥೇರಿಗಾಥ' ಕೂಡ ಇಂಥದ್ದೆ. ನಿಮ್ಮದೇ ವಚನ ಸಾಹಿತ್ಯ ತಗೊಳ್ಳಿ. ಕಾಶ್ಮೀರಿಯ ಲಲ್ಲಾದೇವಿಯ ಹಾಡು ತೆಗೆದುಕೊಳ್ಳಿ. ಅವೆಲ್ಲ ಇಂಥ ನಿರ್ಗತಿಕ, ನೊಂದ ಜನರ ಪರವಾಗಿಯೇ ಇವೆ. ಮಹಾದೇವಿ ವರ್ಮಾ ಅವರ ಕಾವ್ಯ ಕೂಡ. ಈ ಪರಂಪರೆಯ ಕೂಸು ನಾನು. ಇದರರ್ಥ ಇನ್ನೊಂದು ಪರಂಪರೆ ಇಲ್ಲವೆಂದಲ್ಲ. ಅದು ಕೂಡ ಇದೆ. ಆದರೆ ಅದರ ಪ್ರಮಾಣ ಕಡಿಮೆ. ಚಪ್ಪಲಿ ಬಿಡುವ ಸ್ಥಳ ನನಗೆ ಯಾವಾಗಲೂ ಒಂದು ದೊಡ್ಡ ರೂಪಕ. ಇನ್ನು ರಾಜ ಮಹಾರಾಜರು, ಮಂತ್ರಿಗಳ ಚಪ್ಪಲಿಗಳು ಕೂಡ ಇರುತ್ತವೆ. ಆದರೆ ಅವರು ಚಪ್ಪಲಿಗಳನ್ನು ಕಳಚುವುದಿಲ್ಲ. ಚಪ್ಪಲಿ ಹಾಕಿಕೊಂಡೇ ಕೂಡುತ್ತಾರೆ. ಹೀಗಾಗಿ ಅವುಗಳನ್ನು ಬಿಡುವ ಸ್ಥಳಗಳು ನನಗೆ ಗೊತ್ತಿಲ್ಲ. ಅವರು ಯಾವಾಗಲೂ ಚಪ್ಪಲಿಯೊಳಗೆ ಕಾಲು ತೂರಿಸಿಕೊಂಡೇ ಇರುತ್ತಾರೆ. ಜೊತೆಗೆ ಬೇರೆಯವರ ತಲೆಯ ಮೇಲೆ ಚಪ್ಪಲಿ ಸಮೇತ ತಮ್ಮ ಕಾಲುಗಳನ್ನು ಇಡುತ್ತಾರೆ. ಅವರು ಚಪ್ಪಲಿಗಳನ್ನಿಟ್ಟ ತಲೆಗಳ ಜೊತೆ ನನ್ನ ಕಾವ್ಯವಿದೆ.

**◆ ನಾವು ತರುಣರಿದ್ದಾಗ ನಮ್ಮ ಸಮಕಾಲೀನ ಕವಿಗಳು ತುಂಬಾ ಇಷ್ಟವಾಗುತ್ತಾರೆ. ಕೊಂಚ ಹಿಂದಿನವರು ಕೂಡ. ಆದರೆ ಮಧ್ಯವಯಸ್ಕರಾದಂತೆ ತುಂಬಾ ಹಿಂದಿನ ಕಾವ್ಯ, ಪ್ರಾಚೀನ ಕಾವ್ಯ ಇಷ್ಟವಾಗತೊಡಗುತ್ತದೆ. ನಿಮಗೂ ಹೀಗಾಗಿದೆಯೆ?**

ಅರೆ ನಿಜ. ನನಗೇ ಅನೇಕ ಬಾರಿ ಹೀಗಾಗಿದೆ. ಹೀಗಾಗಲೇ ಬೇಕು. ಹೀಗಾಗದಿದ್ದರೆ ನಿಮ್ಮ ಬೆಳವಣಿಗೆ ಅಪಾಯದಲ್ಲಿದೆ ಎಂದರ್ಥ. ಹದಿನೆಂಟನೇ ಶತಮಾನದ ಕವಿಗಳು, ಹತ್ತನೇ ಶತಮಾನದ ಕವಿಗಳು, ವೇದಕಾಲೀನ ರಚನೆಗಳು, ಭಕ್ತಿಕಾಲೀನ ರಚನೆಗಳು, ಅದಕ್ಕೂ ಹಿಂದಿನ ಯಾವುದೋ ಸ್ವರಗಳು ನಮ್ಮನ್ನು ಆಳವಾಗಿ ತಟ್ಟುತ್ತಲೇ ಇರುತ್ತವೆ. ನಾವು ದೊಡ್ಡವರಾದಂತೆ ನಮ್ಮ ಬಟ್ಟೆಗಳು ಚಿಕ್ಕದಾಗತೊಡಗುತ್ತವೆ. ಹಾಗೆಯೇ ಇಲ್ಲಿಯವರೆಗೆ ನಮ್ಮ ಆತ್ಮ ಧರಿಸಿದ ಬಟ್ಟೆಗಳು ಕೂಡ ಸಣ್ಣದೆನಿಸುತ್ತವೆ. ನಾನು ಕವಿತೆ ಬರೆಯಲು ಆರಂಭಿಸಿದಾಗ ಧೂಮಿಲ್ ಅವರ ಪ್ರಭಾವ ತುಂಬಾ ಇತ್ತು. ಒಳ್ಳೆಯ ಕವಿ. ಪ್ರಭಾವ ಶಾಲಿ ಕವಿ. ಆದರೆ ಬರುಬರುತ್ತ ನನಗೇನನಿಸಿತ್ತು ಅಂದರೆ, ಈ ದಾರಿ ಬೇಗ ಮುಗಿಯಲಿದೆ ಅಂತ. ಅಂದರೆ ಈ ದಾರಿಗೆ ದೀರ್ಘ ಪಯಣ ಸಾಧ್ಯವಿಲ್ಲ. ನಾಗಾರ್ಜುನ, ತ್ರಿಲೋಚನ್, ಕೇದಾರನಾಥ್ ಅಗರವಾಲ್ ಅವರ ಕಾವ್ಯಕ್ಕೆ ತಿರುಗಿಕೊಂಡೆ. ಜೊತೆಗೆ ಶಮಶೇರ್, ನಿರಾಲಾ, ಮುಕ್ತಿಬೋಧ್. ಇವರೆಲ್ಲ ಪ್ರಗತಿವಾದಿ ಕವಿಗಳು. ವಿಶೇಷತೆ ಏನೆಂದರೆ, ಇವರೆಲ್ಲ ಸಂಪೂರ್ಣ ಜೀವನದ ಕವಿಗಳು. ಯಾವುದೋ ಒಂದು ವಿಚಾರಸರಣಿಯನ್ನು ಮಂಡಿಸುವ ಕವಿಗಳಾಗಿರಲಿಲ್ಲ ಇವರು. ಹಾಗೇನಾದರೂ ಆದರೆ ಕವಿತೆ ಜಡವಾಗುತ್ತದೆ. ನೀವು ಸಂಪೂರ್ಣ ಜೀವನದ ಕುರಿತು